25	ಶಿವಮೊಗ್ಗ	3586
26	ತುಮಕೂರು	8678
27	ಉಡುಪಿ	2640
	ಒಟ್ಟು	**119246**

890(1032) ಶ್ರೀ ಕೃಷ್ಣಮೂರ್ತಿ ಕೆ ಎಂ (ಕಡೂರು) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಂತಿನಗರ ಗೃಹ ನಿರ್ಮಾಣ ಸಹಕಾರ ಸಂಘ, ಜಯನಗರ ಹಾಗೂ ಶಾಂತಿನಗರ ಗೃಹ ನಿರ್ಮಾಣ ಸಂಘ, ಲಾಂಗ್‌ಫೋರ್ಡ್ ರಸ್ತೆ, ಇದರಲ್ಲಿ ನೈಜವಾದ ಸಂಘ ಯಾವುದು,

ಆ) ಸಂಘಕ್ಕೆ ಆಡಿಟ್ ವರದಿಗಳಲ್ಲಿ ಸಂಘದ ನೋಂದಣಿ ಸಂಖ್ಯೆಯನ್ನು ಉದ್ದೇಶ ಪೂರ್ವಕವಾಗಿ ಬದಲಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಒಂದು ಸಹಕಾರ ಸಂಘವನ್ನು ಖರೀದಿ ಮಾಡಲು ಸಹಕಾರ ಸಂಘಗಳ ಕಾಯ್ದೆಯಡಿಯಲ್ಲಿ ಅವಕಾಶವಿದೆಯೇ,

ಈ) ಹಾಗಿದ್ದಲ್ಲಿ ಕರ್ನಾಟಕ ರಾಜ್ಯದಲ್ಲಿ ಖರೀದಿಸಲ್ಪಟ್ಟ ಸಹಕಾರ ಸಂಘಗಳು ಯಾವುವು?

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು)

ಅ) ಶಾಂತಿನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ, ಲಾಂಗ್‌ಫೋರ್ಡ್ ರಸ್ತೆ, ಶಾಂತಿನಗರ, ಬೆಂಗಳೂರು, ಇದನ್ನು ಸಹಕಾರ ಇಲಾಖೆಯ ನೈಜವಾದ ಸಂಘವೆಂದು ಪರಿಗಣಿಸಿದೆ ಈ ಬಗ್ಗೆ ಶಾಂತಿನಗರ ಗೃಹ ನಿರ್ಮಾಣ ಸಹಕಾರ ಸಂಘ ಜಯನಗರ ಇದರ ಕಾರ್ಯನಿರ್ವಾಹಕ ನಿರ್ದೇಶಕರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಹೂಡಿದ್ದು, ಮಾನ್ಯ ನ್ಯಾಯಾಲಯದಿಂದ ಹನ್ನೆರಡು ವಾರಗಳ ತಡೆಯಾಜ್ಞೆಯನ್ನು ಪಡೆದಿರುತ್ತದೆ

ಆ) ಬಂದಿದೆ

ಇ) ಯಾವುದೇ ಸಹಕಾರ ಸಂಘವನ್ನು ಖರೀದಿಸಲು ಕರ್ನಾಟಕ ಸಹಕಾರ ಸಂಘಗಳ ಅದಿನಿಯಮ ಹಾಗೂ ನಿಯಮಗಳಲ್ಲಿ ಅವಕಾಶವಿಲ್ಲ

ಈ) ಗಮನಕ್ಕೆ ಬಂದಿಲ್ಲ